**ದಿನಾಂಕಃ 09/06/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ ಬಿ.ಜಿ.ಎಸ್. ವಕೀಲರಿಂದಃ**

1. 4 ನೇ ಪ್ರತಿವಾದಿಯ ತಂದೆಯ ಹೆಸರು ಗಿರೀಶ. 4 ನೇ ಪ್ರತಿವಾದಿಯ ತಂದೆಯ ಹೆಸರು ನಂಜೇಗೌಡ ಎಂದರೆ ಸಾಕ್ಷಿಯು ಗಿರೀಶ ಎಂದು ಉತ್ತರಿಸುತ್ತಾರೆ. ನಾನು ದಾವೆಯಲ್ಲಿ 4 ನೇ ಪ್ರತಿವಾದಿಯ ತಂದೆ ನಂಜೇಗೌಡ ಎಂದು ಹೇಳಿ ಬರೆಸಿಲ್ಲ. 4 ನೇ ಪ್ರತಿವಾದಿಯ ತಂದೆ ಬದುಕಿಲ್ಲ. ಲಕ್ಷ್ಮಮ್ಮನವರಿಗೆ 4 ನೇ ಪ್ರತಿವಾದಿ ಒಬ್ಬಳೇ ಮಗಳು. ಚನ್ನೇಗೌಡರ ಮಗ ಜವರೇಗೌಡ ರವರಿಗೆ ದಾವಾ ಐಟಂ ನಂ.1 ಹೇಗೆ ಬಂತೆಂದರೆ ಅದು ನಮ್ಮ ಅಜ್ಜಿ ಪುಟ್ಟಮ್ಮನವರ ತಾಯಿ ಅಕ್ಕಯ್ಯಮ್ಮನವರ ಜಮೀನು ಎಂದು ನುಡಿಯುತ್ತಾರೆ. ಅಕ್ಕಯ್ಯಮ್ಮರವರಿಗೆ ದಾವಾ ಐಟಂ ನಂ.1 ಸೇರಿದ್ದು ಎಂದು ತೋರಿಸಲು ಕೈಬರಹದ ಆರ್.ಟಿ.ಸಿ.ಯನ್ನು ಹಾಜರುಪಡಿಸಿದ್ದೇನೆ. ಅಕ್ಕಯ್ಯಮ್ಮನವರಿಗೆ ಪುಟ್ಟಮ್ಮ ಎಂಬ ಒಬ್ಬಳೇ ಮಗಳು. ಅಕ್ಕಯ್ಯಮ್ಮ ನವರು ತೀರಿಕೊಂಡ ನಂತರ ಜವರೇಗೌಡರವರೇ ಮನೆ ನಿರ್ವಹಣೆಯನ್ನು ಮತ್ತು ವ್ಯವಸಾಯವನ್ನು ನೋಡಿಕೊಳ್ಳುತ್ತಿದ್ದರು. ಸಾಕ್ಷಿ ಸ್ವತಃ ಮನೆ ವ್ಯವಹಾರ ನೋಡಿಕೊಳ್ಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ದಾವಾಪತ್ರದಲ್ಲಿ ಜವರೇಗೌಡರವರು ಮನೆಯ ಕರ್ತನಾಗಿದ್ದರು ಎಂದು ಹೇಳಿ ಬರೆಸಿಲ್ಲ. ದಾವಾ ಐಟಂ ನಂ.1 ಜವರೇಗೌಡರವರ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಸ್ವತ್ತು ಜವರೇಗೌಡರವರು ಬದುಕಿದ್ದಾಗ ಅವರ ಹೆಸರಿನಲ್ಲಿ ಹಕ್ಕು, ಸ್ವಾಧೀನ ಇತ್ತು ಎಂದರೆ ಸರಿಯಲ್ಲ. ಮೋಸದಿಂದ ಅಕ್ಕಯ್ಯಮ್ಮ ರವರ ಹೆಸರಿನಿಂದ ಜವರೇಗೌಡರು ಅವರ ಹೆಸರಿಗೆ ಮಾಡಿಕೊಂಡು ನಂತರ ಕೃಷ್ಣೇಗೌಡರಿಗೆ ಮಾರಾಟ ಮಾಡಿರುತ್ತಾರೆ. 2008 ನೇ ಇಸವಿಯಲ್ಲಿ ಜವರೇಗೌಡರ ಹೆಸರಿಗೆ ಖಾತೆ ಇತ್ತು. ಜವರೇಗೌಡರ ಹೆಸರಿನಲ್ಲಿ ಇದ್ದ ಜಮೀನಿನ 2008 ರ ಪಹಣಿಯನ್ನು ನಾನು ಹಾಜರುಪಡಿಸಿದ್ದೇನೆ. ಮೋಸದಿಂದ ಜವರೇಗೌಡರವರು ಖಾತೆ ಮಾಡಿಸಿಕೊಂಡ ಬಗ್ಗೆ ನಾನು ತಹಶೀಲ್ದಾರ್ ಹಾಗೂ ಎ.ಸಿ

ಯವರ ಮುಂದೆ ಯಾವುದೇ ಪ್ರಕರಣ ದಾಖಲು ಮಾಡಿಲ್ಲ, ಆದರೆ ನಾನು ನಮ್ಮ ತಾತನ ಹೆಸರಿನಲ್ಲಿ ಆಸ್ತಿ ಇದೆ ಎಂದು ತಿಳಿದಿದ್ದೆ ಎಂದು ನುಡಿಯುತ್ತಾರೆ. 2015-16 ನೇ ಸಾಲಿನಲ್ಲಿ ನಮ್ಮ ತಾತನ ಆಸ್ತಿ ಜವರೇಗೌಡರವರ ಹೆಸರಿಗೆ ಹೋಗಿದೆ ಎಂದು ಗೊತ್ತಾಯಿತು. 2015 ರಲ್ಲಿ ಎ.ಸಿ. ನ್ಯಾಯಾಲಯಕ್ಕೆ ಪ್ರಕರಣ ದಾಖಲು ಮಾಡಲು ಏನಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು 7 ನೇ ಪ್ರತಿವಾದಿಯ ಹೆಸರಿಗೆ ಕ್ರಯವಾಗಿ ಪಹಣಿ ನಡೆಯುತ್ತಿತ್ತು ಆದ್ದರಿಂದ ಮೇಲ್ಮನವಿ ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ಕೃಷ್ಣೇಗೌಡರವರಿಗೆ ಕ್ರಯವಾದ ಕ್ರಯಪತ್ರವನ್ನು ಹಾಜರುಪಡಿಸಿದ್ದೇನೆ. ನಾನು ನನ್ನ ದಾವಾಪತ್ರದಲ್ಲಿ 7 ನೇ ಪ್ರತಿವಾದಿಗೆ ಆಗಿರುವ ಕ್ರಯಪತ್ರ ನನಗೆ ಬದ್ಧಪಡಿಸುವುದಿಲ್ಲ ಎಂದು ನಮೂದಿಸಿದ್ದೇನೆ.

2. ನಾನು ದಾವಾ ಐಟಂ ನಂ.1 ರ ಚಕ್ಕುಬಂದಿಯನ್ನು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಜವರೇಲಿಂಗೆಗೌಡರ ಜಮೀನು, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಕೃಷ್ಣೇಗೌಡರವರ ಜಮೀನು ಎಂದು ಹೇಳಿ ಬರೆಸಿದ್ದೇನೆ. ಪೂರ್ವಕ್ಕೆ ಸರ್ಕಾರಿ ರಸ್ತೆ, ಪಶ್ಚಿಮಕ್ಕೆ ಜವರೇಲಿಂಗೇಗೌಡರ ಜಮೀನು, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಕಾವೇರಮ್ಮನವರ ಜಮೀನು ಈ ಚಕ್ಕುಬಂದಿಯ ನಡುವೆ ಇರುವ ಸ್ವತ್ತಿಗೆ ನನಗೆ ಹಕ್ಕಾಗಲೀ, ಸ್ವಾಧೀನವಾಗಲೀ ಇಲ್ಲ. 2008 ರಿಂದಲೂ ಕೃಷ್ಣೇಗೌಡ ಬಿನ್ ಚಿಕ್ಕೇಗೌಡ ರವರೇ ದಾವಾ ಐಟಂ ನಂ.1 ರ ಸ್ವಾಧೀನದಲ್ಲಿದ್ದಾರೆ ಸಾಕ್ಷಿಯು ನಾವು ವ್ಯವಸಾಯ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ಜವರೇಗೌಡ ಮನೆಯ ಕರ್ತನಾಗಿದ್ದರಿಂದ ಮನೆ ಕಟ್ಟುವುದಕ್ಕೆ ಮತ್ತು ಬ್ಯಾಂಕಿನಲ್ಲಿ ಅವಿವಾಹಿತ ಮಗಳಾದ 6 ನೇ ಪ್ರತಿವಾದಿಯವರ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ಠೇವಣಿ ಇಡಲು ಮನೆಯ ಜವಬ್ದಾರಿ ವಹಿಸಿಕೊಂಡು ದಾವಾ ಐಟಂ ನಂ.1 ನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಜವರೇಗೌಡ, ನಂಜೇಗೌಡ, ಸುಂದ್ರಮ್ಮ, ಶಶಿಕುಮಾರ, ದಿನೇಶ ಮತ್ತು ಸರೋಜ ಇವರಿಗೆ ದಾವಾ ಐಟಂ ನಂ.1 ರಲ್ಲಿ ಸಂಪೂರ್ಣ ಹಕ್ಕು ಮತ್ತು ಸ್ವಾಧೀನ ಇದ್ದ ಕಾರಣ ಕೃಷ್ಣೇಗೌಡರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಜವರೇಗೌಡರವರಿಗೆ ಯಾವುದೇ ದುರಭ್ಯಾಸ ಇರಲಿಲ್ಲ,

ಮನೆಯ ಅಭಿವೃದ್ಧಿಗೋಸ್ಕರ ದಾವಾ ಐಟಂ ನಂ.1 ನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಕೃಷ್ಣೇಗೌಡರವರಿಂದ ದಾವಾ ಐಟಂ ನಂ.1 ನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ನನಗಾಗಲೀ, ನನ್ನ ತಾಯಿಗಾಗಲೀ ಯಾವುದೇ ಹಕ್ಕು, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಯಾವುದೇ ಕಾಲದಲ್ಲಿಯೂ ದಾವಾ ಐಟಂ ನಂ.1 ರಲ್ಲಿ ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು: 7 ನೇ ಪ್ರತಿವಾದಿ ಪರ ಶ್ರೀ ಜೆ.ಎಸ್.ಎನ್. ವಕೀಲರಿಂದಃ</u>**

3. ಜವರೇಗೌಡರವರಿಗೆ ಮನೆ ಮತ್ತು ಸರ್ವೆ ನಂಬರ್ 71 ರಲ್ಲಿ 3 ಎಕರೆ 13 ಗುಂಟೆ ಜಮೀನು ಇದೆ. ನಂಜೇಗೌಡರು ಹೌಸಿಂಗ್ ಬೋರ್ಡ್ ನಲ್ಲಿರುವ ಒಂದು ಮನೆಯಲ್ಲಿ ಬಾಡಿಗೆಗೆ ಇದ್ದರು. ಜವರೇಗೌಡರ ಮತ್ತು ನಂಜೇಗೌಡರಿಗೆ ಹುಣಸೇಕೊಪ್ಪದಲ್ಲಿ ಬೇರೆ ಆಸ್ತಿ ಇಲ್ಲ. ನನ್ನ ತಾಯಿ ಕೆರೆಮೇಗಳ ಕೊಪ್ಪಲು ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಅವರು ಮದುವೆಯಾಗಿ 46 ವರ್ಷವಾಗಿದೆ ಅಂದಿನಿಂದಲೂ ಅವರು ಅಲ್ಲೇ ವಾಸಿಸುತ್ತಿದ್ದಾರೆ. ಕೆರೆಮೇಗಳ ಕೊಪ್ಪಲಿನಲ್ಲಿ ನಮಗೆ ಯಾವುದೇ ಜಮೀನು ಇಲ್ಲ, ಆದರೆ ಹುಣಸೇಕೊಪ್ಪ ಗ್ರಾಮದಲ್ಲಿರುವ ಜಮೀನಿನಲ್ಲಿ ನಾವು ವ್ಯವಸಾಯ ಮಾಡುತ್ತಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಹುಣಸೇಕೊಪ್ಪ ಗ್ರಾಮದಲ್ಲಿ ಜಮೀನನ್ನು ವ್ಯವಸಾಯ ಮಾಡುತ್ತಿದ್ದೇವೆ ಎಂದು ತೋರಿಸಲು ಯಾವುದೇ ಕಂದಾಯ ದಾಖಲಾತಿಗಳು ಇಲ್ಲ.

4. ನನಗೆ ಓದಲು ಬರೆಯಲು ಬರುವುದಿಲ್ಲ. ನಿಪಿ.12 ರ ಕಲಂ ನಂ.9 ರಲ್ಲಿ ಕೃಷ್ಣೇಗೌಡ ಬಿನ್ ಲೇಟ್ ಚಿಕ್ಕೇಗೌಡ ಎಂದು ನಮೂದಾಗಿದೆ ಎಂದರೆ ಸರಿ. ಕಲಂ ನಂ.12 ರಲ್ಲಿ ಸಹ ಕೃಷ್ಣೇಗೌಡ ಬಿನ್ ಲೇಟ್ ಚಿಕ್ಕೇಗೌಡ ಎಂದು ನಮೂದಾಗಿದೆ ಎಂದರೆ ಸರಿ. ದಾಖಲಾತಿ ಆಧಾರದ ಮೇಲೆ ಯಾರ ಹೆಸರು ಕಲಂ ನಂ.9 ರಲ್ಲಿ ನಮೂದಾಗಿರುತ್ತದೋ ಅವರೇ ವ್ಯವಸಾಯ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.12 ರ ಕಲಂ ನಂ.9 ರಲ್ಲಿ ಯಾವ ದಾಖಲಾತಿಯ ಆಧಾರದ ಮೇಲೆ ಕೃಷ್ಣೇಗೌಡ ಬಿನ್ ಲೇಟ್ ಚಿಕ್ಕೇಗೌಡ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ, ಆದರೆ ಸಾಕ್ಷಿ

ಮೋಸದಿಂದ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ. ಆ ರೀತಿ ಮೋಸದ ಖಾತೆಯನ್ನು ವಜಾ ಮಾಡಿಸಲು ನಾನು ಕಂದಾಯ ಅಧಿಕಾರಿಗಳ ಮುಂದೆ ಮೇಲ್ಮನವಿಯನ್ನು ಸಲ್ಲಿಸಿಲ್ಲ. ಆ ರೀತಿಯ ಮೋಸದ ಖಾತೆ 2008-09 ರಲ್ಲಿ ಕೃಷ್ಣೇಗೌಡ ಬಿನ್ ಲೇಟ್ ಚಿಕ್ಕೇಗೌಡ ರವರ ಹೆಸರಿಗೆ ಬಂದಿರುತ್ತದೆ. ಆಗಲೇ 2008-09 ರಿಂದ ಮೋಸದ ಖಾತೆ ಆಗಿದೆ ಎಂದು ತಿಳಿದು ಬಂದಿರುತ್ತದೆ. 2008 ರಿಂದ 2017 ರವರೆಗೆ ಸದರಿ ಖಾತೆಯ ಬಗ್ಗೆ ಮೇಲ್ಮನವಿ ಸಲ್ಲಿಸಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ನನಗೆ 2016-17 ನೇ ಇಸವಿಯಲ್ಲಿ ಸದರಿ ಖಾತೆ ಬಗ್ಗೆ ಗೊತ್ತಾಯಿತು ಎಂದು ಸಾಕ್ಷಿ ನುಡಿಯುತ್ತಾರೆ. ಕಂದಾಯ ದಾಖಾತಿಗಳನ್ನು ತೆಗೆದುಕೊಂಡ ನಂತರ ಯಾವ ಆಧಾರದ ಮೇಲೆ ಕೃಷ್ಣೇಗೌಡ ರವರ ಹೆಸರಿಗೆ ಖಾತೆ ಆಯಿತು ಎಂದು ತಿಳಿದುಕೊಳ್ಳಲು ನಾನು ಪ್ರಯತ್ನ ಮಾಡಿಲ್ಲ. ಆ ರೀತಿ ಪ್ರಯತ್ನಪಡಲು ಏನೂ ತೊಂದರೆ ಇರಲಿಲ್ಲ.

5. ನಿಪಿ.12 ರ ಕಲಂ ನಂ.11 ರಲ್ಲಿ ರೂ.1,30,000/- ಮತ್ತು 5,00,000/- ರೂಪಾಯಿಗಳನ್ನು ಪಿ.ಎಲ್.ಡಿ.ಬ್ಯಾಂಕಿನಿಂದ ಸಾಲ ಪಡೆದಿರುವುದು ನಮೂದಾಗಿದೆ ಎಂದರೆ ಸರಿ. ನಾವು ಹಣಕಾಸಿನ ವ್ಯವಹಾರದ ಸಂಬಂಧ ಸಂಬಂಧಪಟ್ಟ ಬ್ಯಾಂಕಿನಲ್ಲಿ ತಕರಾರು ಮಾಡಿಲ್ಲ. ಸಾಕ್ಷಿ ಸ್ವತಃ ಕೇಸು ಹೂಡಿದ್ದರಿಂದ ಸುಮ್ಮನಾದೇವು ಎಂದು ನುಡಿಯುತ್ತಾರೆ. ಬ್ಯಾಂಕು ಮತ್ತು ಸೊಸೈಟಿಗಳಲ್ಲಿ ಯಾರ ಹೆಸರಿನಲ್ಲಿ ಖಾತೆ, ಹಕ್ಕು ಮತ್ತು ಮಾಲೀಕತ್ವ ಇರುತ್ತದೆಯೋ ಅವರ ಹೆಸರಿಗೆ ಸಾಲವನ್ನು ಕೊಡುತ್ತಾರೆ ಎಂದರೆ ಸರಿಯಲ್ಲ. ಬ್ಯಾಂಕಿನಲ್ಲಿ ಫೀಲ್ಡ್ ಆಫೀಸರ್ ಇರುತ್ತಾರೆ ಎಂದರೆ ಸರಿ. ಫೀಲ್ಡ್ ಆಫೀಸರ್ ಜಮೀನಿಗೆ ಬೇಟಿಕೊಟ್ಟು ಯಾರು ವ್ಯವಸಾಯ ಮಾಡುತ್ತಿರುತ್ತಾರೋ ಅವರಿಗೆ ಸಾಲವನ್ನು ಕೊಡುತ್ತಾರೆ ಎಂದರೆ ಸರಿಯಲ್ಲ. ಈಗ ಕೇಳಿದ ಪ್ರಶ್ನೆಗಳನ್ನು ನನ್ನ ತಾಯಿಗೆ ಕೇಳಿದ್ದರೆ ಅವರಿಗೆ ಉತ್ತರಿಸಲು ಆಗುತ್ತಿತ್ತು ಎಂದರೆ ಸರಿ. ಸಾಕ್ಷಿ ಸ್ವತಃ ನನ್ನ ತಾಯಿಗೆ ಆರೋಗ್ಯ ವ್ಯತ್ಯಾಸ ಇದೆ ಎಂದು ನುಡಿಯುತ್ತಾರೆ. ಕೋರ್ಟ್ ಕಮೀಷನರ್ ಮುಖಾಂತರ ನನ್ನ ತಾಯಿಯ ಸಾಕ್ಷ್ಯವನ್ನು ದಾಖಲು ಮಾಡಬಹುದಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿಗೆ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದು ನುಡಿಯುತ್ತಾರೆ.

6. ನನ್ನ ತಾಯಿಗೆ ಯಾರ ರೀತಿ ಖಾತೆ ಬದಲಾವಣೆ ಆಯಿತು ಎಂದು ಗೊತ್ತಿಲ್ಲ. ದಾವೆಯನ್ನು ಹೂಡುವ ಕಾಲಕ್ಕೆ ನಾನು ಹಾಗೂ ನನ್ನ ತಾಯಿ ಇಬ್ಬರೂ ನಮ್ಮ ವಕೀಲರಾದ ಹುಣಸೂರಿನ ನಾಗೇಂದ್ರ ರವರಿಗೆ ಮಾಹಿತಿಯನ್ನು ನೀಡಿರುತ್ತೇವೆ. ನಾನು ವಕೀಲರಿಗೆ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನನ್ನ ಹೇಳಿಕೆ ಮೇಲೆ ನನ್ನ ತಾಯಿ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ.

7. ದಿಃ06/03/2008 ರಂದು ಕೃಷ್ಣೇಗೌಡರವರಿಗೆ ಜವರೇಗೌಡ, ಪುಟ್ಟಮ್ಮ, ನಂಜೇಗೌಡ, ಸುಂದ್ರಮ್ಮ, ವಿ.ಎನ್.ಶಶಿಧರ ಮತ್ತು ವಿ.ಎನ್.ದಿನೇಶರವರು ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ದಿನಾಂಕಃ 06/03/2008 ರ ಜೆರಾಕ್ಸ್ ಕ್ರಯಪತ್ರದಲ್ಲಿರುವ ಭಾವಚಿತ್ರಗಳನ್ನು ತೋರಿಸಿ ಇದರಲ್ಲಿರುವ ವ್ಯಕ್ತಿಗಳು ನಿಮಗೆ ಗೊತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಜೆರಾಕ್ಸ್ ಪ್ರತಿ ಆಗಿರುವುದರಿಂದ ಪೋಟೋಗಳು ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ಅದರ ಮೂಲ ಪ್ರತಿ ಹಾಜರುಪಡಿಸಿದರೆ ಕಾಣಿಸುತ್ತದೆ ಎಂದು ನುಡಿಯುತ್ತಾರೆ. ಮೇಲೆ ಹೇಳಿದ ವ್ಯಕ್ತಿಗಳ ಭಾವಚಿತ್ರಗಳು, ಹೆಬ್ಬೆಟ್ಟಿನ ಗುರುತುಗಳು ಮತ್ತು ಸಹಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೂಲ ಪ್ರತಿಯನ್ನು ತೋರಿಸಿದರೆ ಅವರ ಭಾವಚಿತ್ರಗಳು, ಹೆಬ್ಬೆಟ್ಟಿನ ಗುರುತುಗಳು ಮತ್ತು ಸಹಿಗಳನ್ನು ಗುರುತಿಸಬಹುದು ಎಂದು ನುಡಿಯುತ್ತಾರೆ.

8. 7 ನೇ ಪ್ರತಿವಾದಿ ದಾವಾ ಐಟಂ ನಂ.1 ನ್ನು ಮೇಲೆ ಹೇಳಿದ ವ್ಯಕ್ತಿಗಳಿಂದ ರೂ.1,50,000/-ಗಳಿಗೆ ನೊಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಐಟಂ ನಂ.1 ರ ಇ.ಸಿ.ಯನ್ನು ಪಡೆದುಕೊಂಡಿಲ್ಲ. ನಾವು ದಾವೆ ಹೂಡುವ ಸಮಯಕ್ಕೆ ಇ.ಸಿ.ಯನ್ನು ಪಡೆದುಕೊಂಡಿದ್ದರೆ ಎಲ್ಲಾ ವಿಚಾರ ಗೊತ್ತಾಗುತ್ತಿತ್ತು ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಕೃಷ್ಣೇಗೌಡರವರಿಗೆ ಮಾರಾಟವಾಗುವ ಕಾಲಕ್ಕೆ ಮೇಲ್ಕಂಡ ವ್ಯಕ್ತಿಗಳು ತಾವಲ್ಲದೇ ಬೇರೆ ಯಾರೂ ಹಕ್ಕುದಾರರು ಇಲ್ಲವೆಂದು ನುಡಿದಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನಮಗೂ ಹಕ್ಕಿದೆ ಎಂದು ನುಡಿಯುತ್ತಾರೆ. ಮೇಲ್ಕಂಡ ವ್ಯಕ್ತಿಗಳು ಅವರ ಕಾನೂನುಬದ್ಧ

ಅವಶ್ಯಕತೆಗೋಸ್ಕರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮನೆಯನ್ನು ಕಟ್ಟಲು ಮತ್ತು ಅವಿವಾಹಿತ 6 ನೇ ಪ್ರತಿವಾದಿಯ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿಯನ್ನು ಬ್ಯಾಂಕಿನಲ್ಲಿ ಠೇವಣಿ ಇಡಲು ದಾವಾ ಐಟಂ ನಂ.1 ನನ್ನು ಮಾರಾಟ ಮಾಡುತ್ತಿದ್ದಾರೆಂದು ಹೇಳಿ ಬರೆಸಿದ್ದಾರೆಂದರೆ ಸರಿಯಲ್ಲ. ಅವರು ಮಾರಾಟ ಮಾಡಿದ ಹಣವನ್ನು ಯಾವುದಕ್ಕೆ ಉಪಯೋಗಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಮಾರಾಟ ಮಾಡಿದ್ದರಿಂದ ಕೃಷ್ಣೇಗೌಡರ ಹೆಸರಿಗೆ ದಾಖಲೆಗಳು ಬರುತ್ತಿವೆ ಎಂದರೆ ಸರಿಯಲ್ಲ. ಸದರಿ ಮಾರಾಟವಾದ ನಂತರ 7 ನೇ ಪ್ರತಿವಾದಿಯೇ ದಾವಾ ಐಟಂ ನಂ.1 ರಲ್ಲಿ ಯಾವುದೇ ಅಡ್ಡಿ ಅಡಚಣೆ, ಹಾಗೂ ಹಕ್ಕು, ಮಾಲೀಕತ್ವ ಮತ್ತು ಕಾನೂನು ಬದ್ಧ ಸ್ವಾಧೀನವನ್ನು ಹೊಂದಿದ್ದಾರೆ ಎಂದರೆ ಸರಿಯಲ್ಲ.

9. ನಿಪಿ.12 ರ ಪ್ರಕಾರ 2017-18 ಹಾಗೂ 2019-20 ನೇ ಸಾಲಿನಲ್ಲಿ ನಾನು ದಾವಾ ಐಟಂ ನಂ.1 ರಲ್ಲಿ ರಾಗಿ ಮತ್ತು ಕಾಳುಗಳನ್ನು ಬೆಳೆದಿದ್ದೆ. ಆರ್.ಟಿ.ಸಿ.ಯಲ್ಲಿ ನಾವು ಬೆಳೆದ ಬೆಳೆಯನ್ನು ನಮೂದಿಸಿರುತ್ತಾರೆ ಎಂದರೆ ಸರಿ. ನಿಪಿ.12 ರಲ್ಲಿ ತೋರಿಸಿದ ಕಲಂ ನಂ.12(1)ರಲ್ಲಿನ ಬೆಳೆ ಸರಿಯಾಗಿ ನಮೂದಾಗಿಲ್ಲ. ನಾನು ದಾವಾ ಐಟಂ ನಂ.1 ರಲ್ಲಿ ಯಾವುದೇ ಬೆಳೆಯನ್ನು ಬೆಳೆಯದಿದ್ದ ಕಾರಣ ಯಾವ ಬೆಳೆ ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರಲ್ಲಿ ಎರಡು ಮಾವಿನ ಮರ, ಒಂದು 30x40 ಆರ್.ಸಿ.ಸಿ. ಮನೆ ಇದೆ. ಆ ಮನೆಯನ್ನು ಬೇರೆಯವರು ಉಪಯೋಗಿಸುತ್ತಿದ್ದಾರೆ, ಅವರ ಹೆಸರು ಗೊತ್ತಿಲ್ಲ. ಅವರ ಹೆಸರನ್ನು ತಿಳಿದುಕೊಳ್ಳಲು ನನಗೆ ತೊಂದರೆ ಇಲ್ಲ. ಬೇರೆಯವರು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿಕೊಂಡಿದ್ದಾರೆ. ದಾವೆಯನ್ನು ಹೂಡುವ ಕಾಲಕ್ಕೆ ಒತ್ತುವರಿ ಬಗ್ಗೆ ನನಗೆ ಗೊತ್ತಿಲ್ಲ. ದಾವೆಯನ್ನು ಹೂಡಿದ ನಂತರ ಒತ್ತುವರಿಯ ಬಗ್ಗೆ ಗೊತ್ತಾಯಿತು. ಯಾರು ಒತ್ತುವರಿ ಮಾಡಿದ್ದಾರೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದೆನು. ದಾವೆ ಹೂಡಿದ ನಂತರ ದಾವಾ ಐಟಂ ನಂ.1 ರಲ್ಲಿ ಯಾರು ಒತ್ತುವರಿ ಮಾಡಿ ಮನೆ ಕಟ್ಟಲು ಪ್ರಯತ್ನಿಸಿದರು ಎಂದು ತಿಳಿದುಕೊಂಡಿಲ್ಲ. ಒತ್ತುವರಿ ಬಗ್ಗೆ ಗೊತ್ತಾದ ನಂತರ ದಾವೆಯಲ್ಲಿ ಸದರಿ ಮನೆಯನ್ನು ಸೇರಿಸಿಲ್ಲ. ಸಾಕ್ಷಿ ಸ್ವತಃ

ಯಾವ ಕಡೆ ಒತ್ತುವರಿ ಆಗಿದೆ ಎಂದು ಗೊತ್ತಿಲ್ಲದ ಕಾರಣ ಸೇರಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ತಂತಿ ಬೇಲಿ ಒಳಗಡೆ ಮನೆ ಇದೆ ಎಂದರೆ ಸರಿ. ನಾನು ಕೊಟ್ಟ ದಾವಾ ಐಟಂ ನಂ.1 ರ ಚಕ್ಕುಬಂದಿಯ ಒಳಗೆ ಸದರಿ ಮನೆ ಇದೆ. ಆರ್.ಸಿ.ಸಿ ಮನೆ ಸುಮಾರು ಒಂದೂವರೆ ಕೋಟಿ ಬೆಲೆ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಮೌಲ್ಯದ ಪಟ್ಟಿಯಲ್ಲಿ ಸದರಿ ಮನೆಯನ್ನು ಸೇರಿಸಲು ನನಗೆ ಏನಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಒತ್ತುವರಿಯ ಅಳತೆ ಗೊತ್ತಿಲ್ಲದ ಕಾರಣ ದಾವಾ ಮೌಲ್ಯ ಪಟ್ಟಿಯಲ್ಲಿ ಸೇರಿಸಿಲ್ಲ ಎಂದು ನುಡಿಯುತ್ತಾರೆ. ಈಗಲಾದರೂ ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡಿ ದಾವಾ ಷೆಡ್ಯೂಲ್ ಸ್ವತ್ತಿನ ಆರ್.ಸಿ.ಸಿ.ಮನೆಯ ಮೌಲ್ಯ ಮಾಡಿಸಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಇಲ್ಲ ಎಂದು ನುಡಿಯುತ್ತಾರೆ. ತಾಲ್ಲೂಕು ಸರ್ವೆಯರ್ ನ್ನು ನೇಮಕ ಮಾಡಿ ಒತ್ತುವರಿ ಬಗ್ಗೆ ತಿಳಿದುಕೊಳ್ಳಲು ನನಗೆ ತೊಂದರೆ ಇಲ್ಲ. ಒತ್ತುವರಿ ಮಾಡಿ ಮನೆ ಕಟ್ಟುವುದನ್ನು ನಾವು ತಕರಾರು ಮಾಡಿಲ್ಲ. ದಾವಾ ಐಟಂ ನಂ.1 ರ ಒಳಗೆ ಆರ್.ಸಿ.ಸಿ ಮನೆ ಇದೆ, ಯಾವುದೇ ಒತ್ತುವರಿ ಮಾಡಿ ಮನೆ ಕಟ್ಟಿಲ್ಲ ಎಂದರೆ ಸರಿಯಲ್ಲ. 7 ನೇ ಪ್ರತಿವಾದಿ ದಾವಾ ಐಟಂ ನಂ.1 ರ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ 7 ನೇ ಪ್ರತಿವಾದಿಯೇ ದಾವಾ ಐಟಂ ನಂ.1 ನ್ನು ಒತ್ತುವರಿ ಮಾಡಿ ಮನೆ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ಮನೆಯನ್ನು ಸುಮಾರು 4-5 ವರ್ಷಗಳ ಹಿಂದೆ ಕೃಷ್ಣೇಗೌಡರವರು ಕಟ್ಟಿರುತ್ತಾರೆ.

10. 7 ನೇ ಪ್ರತಿವಾದಿ ಮೇಲ್ಕಂಡ ವ್ಯಕ್ತಿಗಳಿಂದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಸದ್ಭಾವನೆಯಿಂದ ದಾವಾ ಐಟಂ ನಂ.1 ನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಅವರು ದಾವಾ ಐಟಂ ನಂ.1 ನ್ನು ಖರೀದಿಸಿದ ದಿನದಿಂದ ಇಲ್ಲಿಯವರೆಗೂ ಅವರೇ ಮನೆಯನ್ನು ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಅವರು ಮನೆಯನ್ನು ಕಟ್ಟಿಕೊಂಡ ದಿನದಿಂದ ಅವರೇ ಪ್ರಶ್ನಾತೀತವಾದ ಹಕ್ಕು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಮೇಲ್ಕಂಡ ವ್ಯಕ್ತಿಗಳು ಕುಟುಂಬದ ಕಾನೂನುಬದ್ಧ ಅವಶ್ಯಕತೆಗೋಸ್ಕರ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ನೀವು ಹೇಳಿದ ರೀತಿಯಲ್ಲಿ ಮಾರಾಟ

ಮಾಡಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿಯಿಂದ ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**